ಜೋಯಿಡಾದಲ್ಲಿ ಕುಡಿಯುವ ನೀರಿನ ಯೋಜನೆ.

2969-ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯ ಜೋಯಿಡಾಕ್ಕೆ ಕುಡಿಯುವ ನೀರಿನ ಯೋಜನೆಯನ್ನು ಜಿಲ್ಲಾ ಪರಿಷತ್ತು ಮಂಜೂರು ಮಾಡಿ ಕಾಮಗಾರಿಯ ಅನುಷ್ಟಾನದ ಸಲುವಾಗಿ ಭೂ ಸೇನಾ ನಿಗಮಕ್ಕೆ ವಹಿಸಿರುವುದು ನಿಜವಲ್ಲವೇ?

ಆ) ಹಾಗಿದ್ದಲ್ಲಿ ಎಂದಿನಿಂದ ಈ ಕಾಮಗಾರಿಯನ್ನು ಭೂ ಸೇನಾ ನಿಗಮಕ್ಕೆ ವಹಿಸಿಕೊಡಲಾಯಿತು?

ಇ) ಈ ಕಾಮಗಾರಿಗಳ ಸಲುವಾಗಿ ಜಿಲ್ಲಾ ಪರಿಷತ್ತು ಭೂ ಸೆನಾ ನಿಗಮಕ್ಕೆ 7 ಲಕ್ಷ ರೂಪಾಯಿಗಳನ್ನು ನೀಡಿರುವುದು ನಿಜವಲ್ಲವೇ?

ಈ) ಕಾಮಗಾರಿಗಳಿಗಾಗಿ ಹಣ ಪಡೆದು 2 ವರ್ಷಗಳಾಗಿದ್ದರೂ ಇದುವರೆವಿಗೂ ಕೆಲಸ ಪ್ರಾರಂಭಿಸದಿರಲು ಕಾರಣಗಳೇನು?

ಉ) ಭೂಸೇನಾ ನಿಗಮದಲ್ಲಿ ಈ ಕರ್ತವ್ಯ ಲೋಪಕ್ಕೆ ಕಾರಣರಾದವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳುವುದಲ್ಲದೆ ಮೇಲ್ಕಂಡ ಕುಡಿಯುವ ನೀರಿನ ಯೋಜನೆಯ ಕಾಮಗಾರಿಯನ್ನು ಕೂಡಲೇ ಪ್ರಾರಂಭಿಸಲು ಕ್ರಮ ಸರ್ಕಾರ ಕೈಗೊಳ್ಳುವುದೇ?

ಶ್ರೀ ಕೆ.ಪೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಹೌದು.

ಆ) 5-4-1991

ಇ) ಇಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಉ.ಕನ್ನಡ ಜಿಲ್ಲೆಯಲ್ಲಿ ಏತ ನೀರಾವರಿ ಯೋಜನೆ

2970 - ಶ್ರೀ ಆರ್.ವಿ.ದೇಶಪಾಂಡೆ (ಹಳಿಯಾಳ ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾರವಾರ ಜಿಲ್ಲೆಯಲ್ಲಿ ಹೊಸದಾಗಿ ಎಲ್ಲೆಲ್ಲಿ ಏತ ನೀರಾವರಿ ಯೋಜನೆಗಳನ್ನು ಪ್ರಾರಂಭಿಸಲಾಗುವುದು.

ಆ) ಈ ಯೋಜನೆಗಳನ್ನು ಎಂದಿನಿಂದ ಪ್ರಾರಂಭಿಸಲಾಗುವುದು.

ಇ) ಈ ಯೋಜನೆಗಳನ್ನು ಪ್ರಾರಂಭಿಸಿದಾಗ ಜಿಲ್ಲೆಯಲ್ಲಿ ಎಷ್ಟು ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ದೊರೆಯುವುದು.

ಈ) ಇದಕ್ಕಾಗಿ ವೆಚ್ಚವಾಗಲಿರುವ ಹಣವೆಷ್ಟು. ಇಲ್ಲಿಯವರೆವಿಗೂ ಈ ಹೊಸ ಯೋಜನೆಗಳಿಗಾಗಿ ಬಿಡುಗಡೆ ಮಾಡಲಾಗಿರುವ ಹಣವೆಷ್ಟು?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು)

ಅ) ಕಾರವಾರ ಜಿಲ್ಲೆಯಲ್ಲಿ ಹೊಸದಾಗಿ 35 ಏತ ನೀರಾವರಿ ಯೋಜನೆಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ. ವಿವರಗಳನ್ನು ಅನುಬಂಧ 'ಅ' ದಲ್ಲಿ ಕೊಡಲಾಗಿದೆ.

ಆ) ಮೇಲ್ಕಾಣಿಸಿದ 35 ಯೋಜನೆಗಳ ಮೊದಲಿನ ಪೈಕಿ 11ಯೋಜನೆಗಳನ್ನು 1991-92ನೇ ಸಾಲಿನಲ್ಲಿ ತೆಗೆದುಕೊಳ್ಳಲು ಯೋಜಿಸಲಾಗಿದ್ದು, ಉಳಿದವುಗಳನ್ನು 8ನೇ ಪಂಚವಾರ್ಷಿಕ ಮುಕ್ತಾಯವಾಗುವುದರಲ್ಲಿ ಕೈಗೆತ್ತಿಕೊಳ್ಳಲು ಯೋಜಿಸಲಾಗಿದೆ.

ಇ) ಈ ಯೋಜನೆಗಳನ್ನು ಪ್ರಾರಂಭಿಸಿ ಅವುಗಳನ್ನು ಕಾರ್ಯಗತ ಮಾಡಿದ ನಂತರ ಸುಮಾರು 26594 ಎಕರೆ (10,762 ಹೆಕ್ಟೇರ್‌ಗಳಷ್ಟು) ಭೂಮಿಗೆ ನೀರಾವರಿ ಸೌಲಭ್ಯ ದೊರೆಯುವ ಅಂದಾಜಿದೆ.

ಈ) ಇದಕ್ಕೆ ಸುಮಾರು 17.25ಕೋಟಿರೂ.ಗಳು ಬೇಕಾಗಬಹುದೆಂದು ಅಂದಾಜಿಸಲಾಗಿದೆ. ಇಲ್ಲಿಯವರೆಗೆ ಈ ಹೊಸ ಯೋಜನೆಗಳಿಗೆ ಯಾವುದೇ ಹಣ ಬಿಡುಗಡೆಯಾಗಿರುವುದಿಲ್ಲ.

ಅನುಬಂಧ-ಆ

ಸಂಖ್ಯೆ	ಯೋಜನೆಯ ಹೆಸರು.
1.	ಏತ ನೀರಾವರಿ ಯೋಜನೆ ಮಲ್ಲೇನಹಳ್ಳಿ ತಾ. ಶಿರ್ಸಿ
2.	ಏತ ನೀರಾವರಿ ಯೋಜನೆ ಬನಲೇಬೈಲ ತಾ. ಯಲ್ಲಾಪುರ
3.	ಏತ ನೀರಾವರಿ ಯೋಜನೆ ರಾಮನಗರ ತಾ. ಸುಪಾ
4.	ಏತ ನೀರಾವರಿ ಯೋಜನೆ ಭಾಸಿ, ತಾ. ಶಿರ್ಸಿ
5.	ಏತ ನೀರಾವರಿ ಯೋಜನೆ ಸಂತೆಪೇಟೆ. ತಾ. ಅಂಕೋಲಾ
6.	ಏತ ನೀರಾವರಿ ಯೋಜನೆ ಚಪ್ಪೋಲಿ ತಾ. ಸುಪಾ
7.	ಏತ ನೀರಾವರಿ ಯೋಜನೆ ಸಿತವಾಡ ತಾ. ಕುಮಟಾ
8.	ಏತ ನೀರಾವರಿ ಯೋಜನೆ ಶಿರಕುಂಜಿ ತಾ. ಕುಮಟಾ
9.	ಏತ ನೀರಾವರಿ ಯೋಜನೆ ಶಿರಬಟ್ಟಿ ತಾ. ಶಿರ್ಸಿ
10	ಏತ ನೀರಾವರಿ ಅಂಡಗಿ ತಾ: ಶಿರ್ಸಿ.
12.	ಏತ ನೀರಾವರಿ ಯೋಜನೆ ಅಗಸವಿ ತಾ. ಅಂಕೋಲಾ
13	ಏತ ನೀರಾವರಿ ಯೋಜನೆ ಹಿಲ್ಲೂರು ತಾ. ಅಂಕೋಲಾ
14.	ಏತ ನೀರಾವರಿ ಹಂದಲಿ ತಾ. ಹಳಿಯಾಳ
15	ಏತ ನೀರಾವರಿ ಯೋಜನೆ ಇಡಗುಂಜಿ ತಾ. ಹೊನ್ನಾವರ
16.	ಏತ ನೀರಾವರಿ ಯೋಜನೆ ಜಾಲವಳ್ಳಿ ತಾ. ಹೊನ್ನಾವರ.
17.	ಏತ ನೀರಾವರಿ. ಯೋಜನೆ ಕರುವಾ ತಾ. ಹೊನ್ನಾವರ.
18.	ಏತ ನೀರಾವರಿ ಯೋಜನೆ ಬೆರಂಕಿ ತಾ. ಹೊನ್ನಾವರ.
19.	ಏತ ನೀರಾವರಿ ಯೋಜನೆ ಉಪ್ಪಿನಗುಡಿ ತಾ. ಹೊನ್ನಾವರ.
20.	ಏತ ನೀರಾವರಿ ಯೋಜನೆ ವಾಲಕೋಡ್ಲು ತಾ. ಹೊನ್ನಾವರ.
21.	ಏತ ನೀರಾವರಿ ಯೋಜನೆ ಕುರಕಿ ತಾ. ಹೊನ್ನಾವರ.
22.	ಏತ ನೀರಾವರಿ ಯೋಜನೆ ಸಾವಸಿ ತಾ. ಹೊನ್ನಾವರ.
23.	ಏತ ನೀರಾವರಿ ಯೋಜನೆ ಗೋಟೇಗಳಿ ತಾ. ಕಾರವಾರ
24.	ಏತ ನೀರಾವರಿ ಯೋಜನೆ ಕಾಚ್ ತಾ. ಕಾರವಾರ

25. ಏತ ನೀರಾವರಿ ಯೋಜನೆ ಕಾಟ್ಟೀ ತಾ. ಕಾರವಾರ
26. ಏತ ನೀರಾವರಿ ಯೋಜನೆ ಸಿದ್ದಾರ ತಾ. ಕಾರವಾರ
27. ಏತ ನೀರಾವರಿ ಯೋಜನೆ ವೈಲವೆದೇ ತಾ. ಕಾರವಾರ
28. ಏತ ನೀರಾವರಿ ಯೋಜನೆ ಕೆರವಡಿ ತಾ. ಕಾರವಾರ
29. ಏತ ನೀರಾವರಿ ಯೋಜನೆ ಕಾತಾರ ತಾ. ಕಾರವಾರ
30. ಏತ ನೀರಾವರಿ ಯೋಜನೆ ಕಲ್ಲೂಳ್ಳಿ ತಾ. ಮುಂಡಗೂಡ
31. ಏತ ನೀರಾವರಿ ಯೋಜನೆ ಉಗ್ಗಿನಕೆರೆ ತಾ. ಮುಂಡಗೂಡ
32. ಏತ ನೀರಾವರಿ ಯೋಜನೆ ಗುಂಡಾಪೂರ ತಾ. ಶಿರ್ಸಿ
33. ಏತ ನೀರಾವರಿ ಯೋಜನೆ ಭವಾನಿಗೊಂಡ ತಾ. ಶಿರ್ಸಿ
34. ಏತ ನೀರಾವರಿ ಯೋಜನೆ ಅಡೋಲಿ ತಾ. ಸುಪಾ
35. ಏತ ನೀರಾವರಿ ಯೋಜನೆ ಗುಳ್ಳಾಪೂರ ತಾ. ಯಲ್ಲಾಪುರ.

ಗುಬ್ಬಿ ವೀರಣ್ಣನವರ ಹೆಸರಿನಲ್ಲಿನ ಪ್ರಶಸ್ತಿಗಳು.

3041-ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ): ಮಾನ್ಯ ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) *ಮಹಾನ್ ರಂಗಭೂಮಿ ನಟರಾದ ಗುಬ್ಬಿ ವೀರಣ್ಣನವರ ಜನ್ಮ ಶತಾಬ್ಧಿ ಆಂಗವಾಗಿ ಸರ್ಕಾರ ರಂಗಭೂಮಿಯಲ್ಲಿ ಅನನ್ಯ ಸೇವೆ ಸಲ್ಲಿಸಿದವರಿಗೆ ಗುಬ್ಬಿ ವೀರಣ್ಣನವರ ಹೆಸರಿನಲ್ಲಿ ಪ್ರಶಸ್ತಿ ನೀಡುವ ಬಗ್ಗೆ ಪರಿಶೀಲಿಸುತ್ತಿದೆಯೇ?*

ಆ) *ಸರ್ಕಾರ ಈಗಾಗಲೇ ಗುಬ್ಬಿ ವೀರಣ್ಣನವರ ಹೆಸರಿನಲ್ಲಿ ರಂಗಮಂದಿರವನ್ನು ನಿರ್ಮಿಸುತ್ತಿರುವುದರಿಂದ ಪ್ರಶಸ್ತಿಯನ್ನು ಸಹ ಅವರ ಹೆಸರಿನಲ್ಲಿ ಪ್ರಾರಂಭಿಸಿದರೆ ಈ ಮಹಾನ್ ನಾಟಕಕಾರರನ್ನು ಗೌರವಿಸಿದಂತಾಗುವುದಿಲ್ಲವೇ?*

ಇ) *ಸರ್ಕಾರ ಈ ಬಗ್ಗೆ ಕ್ರಮ ಕೈಗೊಳ್ಳುವುದೇ?*

ಶ್ರೀ ಎಸ್. ರಮೇಶ್ (ಯುವಜನಸೇವಾ, ಕ್ರೀಡಾ, ಕನ್ನಡ ಸಂಸ್ಕೃತಿ ಸಚಿವರು)

ಅ) ಹೌದು.

ಆ) ಹೌದು.

ಇ) ಉದ್ಭವಿಸುವುದಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ

2988-ಶ್ರೀ ಜಿ.ಎಸ್. ಆಚಾರ್ (ಬೈಂದೂರು) : ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) *ಪ್ರವಾಸೋದ್ಯಮ ಇಲಾಖೆಯಿಂದ ದಕ್ಷಿಣಕನ್ನಡದಲ್ಲಿ ಈತನಕ ಯಾವ ಯಾವ ಸ್ಥಳಗಳನ್ನು ಅಭಿವೃದ್ಧಿಪಡಿಸಲಾಗಿದೆ. ಹಾಗೂ ಇದಕ್ಕೆ ತಗುಲಿದ ವೆಚ್ಚ ಎಷ್ಟು.*

ಆ) *ಪ್ರಸ್ತುತ ವರ್ಷದಲ್ಲಿ ಯಾವ ಸ್ಥಳಗಳ ಅಭಿವೃದ್ಧಿಗೆ ಯೋಜಿಸಲಾಗಿದೆ. ಹಾಗೂ ಇದಕ್ಕೆ ತಗಲುವ ವೆಚ್ಚ ಎಷ್ಟು ಈ ಯೋಜನೆಗಳ ರೂಪ ರೇಷೆಗಳೇನು?*

ಇ) *ಅಪೂರ್ಣ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸರ್ಕಾರವು ತೆಗೆದುಕೊಂಡ ಕಾರ್ಯಕ್ರಮಗಳೇನು?*